

ಉತ್ಸಾಹವನ್ನೆಲ್ಲ ಏನೂ ಹೇಳದೆ ಕೇವಲ ಖರ್ಚಿಗೆ ಮತ್ತು ಊಟಕ್ಕೆ ಮಾತ್ರ ಹಣ ಪೀಕಿಸಿ, ಆ ದುಡ್ಡಲ್ಲೇ ಒಂದು ಕ್ವಾಟರನ್ನು ಬಸ್ಸು ಹತ್ತುವ ಮುನ್ನ ಸ್ಟ್ಯಾಂಡ್ ಪಕ್ಕವೇ ಇದ್ದ ಗವರ್ನ್‌ಮೆಂಟ್ ಆಥೋರೈಸ್ಡ್ ಕುಡಿ ಡೀಲರ್ಸ್ ವೈನ್ ಶಾಪಲ್ಲಿ ಖರೀದಿಸಿ ಏರಿಸಿದೆ. ಬಸ್ ಕಂಡಕ್ಟರ್ ನನ್ನ ಪರಿಚಯಸ್ಥ; ನನ್ನ ಹತ್ತಿರ ಏನೂ ಟಿಕೆಟ್ ದುಡ್ಡು ಕೇಳಲಿಲ್ಲ... ಅದೂ ಇದೂ ಅಂತ ಹಾದಿಬೀದಿ ಸಮಾಚಾರ ಮಾತನಾಡುತ್ತ ಧಿಮ್ ಎನ್ನುತ್ತಿದ್ದ ತಲೆ ಎತ್ತಿ ದುರ್ಗಾ ಮಂದಿರ ಸ್ಟಾಪಲ್ಲಿ ಇಳಿದಾಗ ಭರ್ತಿ ಬೆಳಗ್ಗೆ ಹನ್ನೊಂದು ಗಂಟೆ. ಈ ಹನ್ನೊಂದರಿಂದ ಎರಡರ ತನಕ ನಿಮಗೆ ಕೂತು ಮಾಡಲು ಕೆಲಸ ಇಲ್ಲದಿದ್ದರೆ ದಿನ ಅಸಹನೀಯವಾಗುತ್ತದೆ. ಸುಡುವ ಬಿಸಿಲು, ಕರ್ಕಶ ವಾಹನಗಳ ಕೂಗು, ಪದೇ ಪದೇ ಏಳುವ ಕೆಂಪು ದೂಳು, ತಿನ್ನಲೆಂದು ಕಾಯಕ ಮಾಡುವ ಗತಿ ನನಗೆ ಇರದಿದ್ದರೆ ಇಷ್ಟೊತ್ತಿಗೆ ನಾನು ಮಂಗಳೂರಿನ ಎಲೈಟ್ ಬಾರಲ್ಲಿ ನುಣುಪಾದ ಸೋಫಾದ ಮೇಲೆ ಅಡ್ಡಾಗಿ ಕೋಲ್ಡ್ ಬ್ರೂ ಬೀರ್ ಸವಿದು, ನಂತರ ನೀಲಿ ಟಕ್ಕಿಲ ಆರ್ಡರ್ ಮಾಡುತ್ತಿದ್ದೇನೋ. ಅಯ್ಯೋ, ಅಲ್ಲಿನ ಹವಾಮಾನ ಎಷ್ಟೊಂದು ತಂಪು... ಈ ಹೊತ್ತಿಗೆಲ್ಲ ಕಣ್ಣು ಬಿಡುವ ಆ ಐಷಾರಾಮಿ ಪಾನಗೃಹ, ವಯ್ಯಾರದ ಸೇಂಟ್ ಸೆಬಾಸ್ಟಿಯನ್ ಕಾಲೇಜು ಜೋಡಿಗಳಿಂದ ಗಿಜಿಗುಟ್ಟಲು ಇನ್ನೂ ಐದರಿಂದ ಆರು ಗಂಟೆಗಳಾದರೂ ಬೇಕಿತ್ತು. ನನ್ನದೇ ಸಾಮ್ರಾಜ್ಯ ಅಂತ ಸಿಕ್ಕ ಮಹಾ ಕುರ್ಚಿಗಳಲ್ಲೆಲ್ಲ ಕೂತು ನಾನು ಕುಡಿಯಬಹುದಿತ್ತು.